ಆ) ಇದರಲ್ಲಿ 6 ಎಕರೆ ಜಮೀನು ಸರ್ಕಾರದ ಸ್ವಾಧೀನದಲ್ಲಿದ್ದು, ಇನ್ನುಳಿದ 22 ಗುಂಟೆ ಜಮೀನನ್ನು ಖಾಸಗಿಯವರು ಅತಿಕ್ರಮಿಸಿರುತ್ತಾರೆ.

ಇ) ಅತಿಕ್ರಮಣದಾರರು ಅಫಜಲಪೂರ ನ್ಯಾಯಾಲಯದಲ್ಲಿ ವ್ಯಾಜ್ಯ ಹೂಡಿರುವುದರಿಂದ, ಒತ್ತುವರಿಯಾಗಿರುವ ಜಮೀನು ತೆರವುಗೊಳಿಸುವ ಪ್ರಕರಣ ನ್ಯಾಯಾಲಯದಲ್ಲಿದೆ.

784 (1003) ಶ್ರೀ ಪಾಟೀಲ್ ಎಂ.ವೈ. (ಅಫ್ಜಲಪುರ): ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಫಜಲಪೂರ ಮತಕ್ಷೇತ್ರದಲ್ಲಿ ಕೆರೆಗಳ ಸಂಖ್ಯೆಗಳೆಷ್ಟು ಹಾಗೂ ಆ ಕೆರೆಗಳ ಮುಖಾಂತರ ಎಷ್ಟು ಎಕರೆ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದೆ ;

ಆ) ಆ ಕ್ಷೇತ್ರದ ಕೆರೆಗಳು ತುಂಬದೇ ಇದ್ದ ಪಕ್ಷದಲ್ಲಿ ಹತ್ತಿರದಲ್ಲಿ ಹರಿಯುತ್ತಿರುವ ಭೀಮಾ ನದಿಯಿಂದ ಈ ಕೆರೆಗಳಿಗೆ ನೀರು ತುಂಬಿಸುವ ಕೆಲಸವನ್ನು ಸರ್ಕಾರ ಕೈಗೆತ್ತಿಕೊಳ್ಳುವುದೇ ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯ ಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು):

ಅ) ಅಫಜಲಪೂರ ಮತಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಡಿ 8 ಕೆರೆಗಳು ಅಸ್ತಿತ್ವದಲ್ಲಿರುತ್ತವೆ. 2000–2001ನೇ ಸಾಲಿನಲ್ಲಿ ಈ ಕೆರೆಗಳಿಂದ 254.30 ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಿದ್ದು, ನಂತರದ ವರ್ಷಗಳಲ್ಲಿ ಮಳೆ ಬಾರದೆ ಈ ಕೆರೆಗಳು ತುಂಬದೇ ಇದ್ದ ಕಾರಣ, ಯಾವುದೇ ನೀರಾವರಿ ಸೌಲಭ್ಯ ಕಲ್ಪಿಸಲು ಸಾಧ್ಯವಾಗಿಲ್ಲ.

ಆ) ತಾಂತ್ರಿಕ ಶಕ್ಯತೆ ಹಾಗೂ ಅನುದಾನದ ಲಭ್ಯತೆಯ ಆಧಾರದ ಮೇಲೆ ಪರಿಶೀಲಿಸಲಾಗುವುದು.

785 (349) ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ): ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮುಂಡರಗಿ ತಾಲೂಕು ಡಂಬಳ ನೀರಾವರಿ ಕೆರೆಯ ನೂತನ ಬಲದಂಡೆ ಕಾಲುವೆಯ ಕೆಲಸ ಪ್ರಾರಂಭವಾದ ದಿನಾಂಕ ತಿಳಿಸುವುದು ;

ಆ) ಪ್ರಾರಂಭದಲ್ಲಿ ಈ ಕಾಲುವೆಯ ಅಂದಾಜು ಮೊತ್ತ ಎಷ್ಟಿತ್ತು ; ಇಲ್ಲಿಯವರೆಗೆ ಖರ್ಚಾದ ಹಣವೆಷ್ಟು ;

ಇ) ಈ ಕಾಲುವೆಯ ಕಾಮಗಾರಿ ಮುಗಿದು ರೈತರಿಗೆ ನೀರಾವರಿ ಮಾಡಲು ಎಷ್ಟು ವರ್ಷ ಬೇಕಾಗುತ್ತದೆ ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯ ಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು):

ಅ) ದಿನಾಂಕ 01/10/2003 ರಂದು ಪ್ರಾರಂಭಿಸಲಾಯಿತು.

ಆ) ಮೂಲ ಅಂದಾಜು ಮೊತ್ತ ರೂ. 20.00 ಲಕ್ಷ ಈ ಕಾಮಗಾರಿಗೆ ಇಲ್ಲಿಯವರೆಗೆ ಖರ್ಚಾದ ಹಣ 12.84 ಲಕ್ಷ ರೂ.ಗಳು

ಇ) ಅಕ್ಟೋಬರ್ 2006ರಲ್ಲಿ ಪೂರ್ಣಗೊಳಿಸಲಾಗಿದೆ.

786 (1252) ಶ್ರೀ ರಘು ಎಸ್. (ಶಾಂತಿನಗರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಉತ್ತರ ಜಾಲ ಹೋಬಳಿ, ಹೊಸಹಳ್ಳಿ ಗ್ರಾಮದ ಸರ್ವೆ ನಂ. 21ರಲ್ಲಿರುವ 200 ಎಕರೆ 30 ಗುಂಟೆ ವಿಸ್ತೀರ್ಣದ ಸರ್ಕಾರಿ ಗೋಮಾಳದ ಜಮೀನಿನಲ್ಲಿ ರಸ್ತೆ, ಸ್ಮಶಾನ ಇತ್ಯಾದಿಗಳಿರುವ ಪ್ರದೇಶವೆಷ್ಟು ;

ಆ) ಈ ಸರ್ವೆ ನಂ.ನ ವಿಸ್ತೀರ್ಣದಲ್ಲಿ ಈವರೆಗೆ ದುರಸ್ಥಿಯಾಗಿರುವ ಪ್ರದೇಶ ಎಷ್ಟು ;

ಇ) ಆರ್.ಟಿ.ಸಿ. ಪ್ರಕಾರ ದುರಸ್ಥಿಯಾಗದೇ ಇರುವ ಪ್ರದೇಶ ಎಷ್ಟು ;

ಈ) ನಮೂನೆ 50 ಮತ್ತು 53ರ ನಡವಳಿಕೆ ನಡೆದು ವಜಾ ಆಗಿರುವ ವಿಸ್ತೀರ್ಣ ಎಷ್ಟು ;

ಉ) ನಮೂನೆ 50 ಮತ್ತು 53ರ ಅರ್ಜಿಗಳನ್ನು ಹೊರತುಪಡಿಸಿ ಒತ್ತುವರಿಯಾಗಿರುವ ಇತರೇ ಪ್ರದೇಶದ ವಿಸ್ತೀರ್ಣ ಎಷ್ಟು; (ವಿವರ ಒದಗಿಸುವುದು) ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) 11 ಎಕರೆ 12 ಗುಂಟೆ

ಆ) ರಿ.ಸ.ಸಂ. 160 ರಿಂದ 181ರ ವರೆಗೆ ಪೋಡಿ ದುರಸ್ತಿಯಾಗಿರುವ ಪ್ರದೇಶ 92 ಎಕರೆ 20 ಗುಂಟೆ

ಇ) 37 ಎಕರೆ 32 ಗುಂಟೆ

ಈ) 30 ಎಕರೆ 15 ಗುಂಟೆ

ಉ) 28 ಎಕರೆ 39 ಗುಂಟೆ (ವಿವರಗಳನ್ನು ಇದರೊಂದಿಗೆ ಲಗತ್ತಿಸಿ ಅನುಬಂಧದಲ್ಲಿ ನೀಡಲಾಗಿದೆ).

ಅನುಬಂಧ

(ರಿ.ಸ.ನಂ. 21ರಲ್ಲಿ ಒತ್ತುವರಿಯಾಗಿರುವ ಬಾಬ್ತು ತಖ್ತೆ (ನಮೂನೆ 50 ಮತ್ತು 53ನ್ನು ಹೊರತುಪಡಿಸಿ)

ಕ್ರ.ಸಂ.	ಬ್ಲಾಕ್ ಸಂಖ್ಯೆ	ಬಗರ್ ಹುಕುಂ ಸಾಗುವಳಿದಾರರ ಹೆಸರು	ಎ:ಗುಂ
1.	2	ತಿಮ್ಮಪ್ಪ ಬಿನ್ ತಾಯಪ್ಪ	4–05
2.	4	ರಾಮಣ್ಣ ಬಿನ್ ತಿಮ್ಮಪ್ಪ	1–00
3.	7	ಡಿ. ಫಕೃದ್ಧಿನ್ ಬಿನ್ ಷೇಕ್ ದಾವೂದ್ ಸಾಬಿ	7–20